ಆ) ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರನ್ನು ಈ ಹಿಂದೆ ಖಾಯಂ ನೌಕರರೆಂದು ಪರಿಗಣಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಈಗ ಅದು ಯಾವ ಹಂತದಲ್ಲಿದೆ;

ಇ) ಈ ಪ್ರಸ್ತಾವನೆ ವಿಳಂಬವಾಗಲು ಕಾರಣಗಳೇನು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ರಾಯಚೂರು ಜಿಲ್ಲೆ, ಲಿಂಗಸಗೂರು ತಾಲ್ಲೂಕು ವ್ಯಾಪ್ತಿಯಲ್ಲಿನ ಹಟ್ಟಿ ಚಿನ್ನದ ಗಣಿ ಕಂಪನಿಯಲ್ಲಿ ಕೆಳಕಂಡಂತೆ ತಾತ್ಕಾಲಿಕವಾಗಿ ಒಟ್ಟು 498 ಗುತ್ತಿಗೆ ದಿನಗೂಲಿ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ :-

❖ ಗಣಿ ವಿಭಾಗ	:	141
❖ ಲೋಹ ವಿಭಾಗ	:	134
❖ ತಾಂತ್ರಿಕ ವಿಭಾಗ	:	95
❖ ಹೊಸ ಯೋಜನೆ	:	74
❖ ಆಡಳಿತ ವಿಭಾಗ	:	54
ಒಟ್ಟು	:	**498**

ಆ) ಹೌದು. ಪರಿಶೀಲನಾ ಹಂತದಲ್ಲಿದೆ.

ಇ) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು ರಿಟ್ ಅರ್ಜಿ ಸಿವಿಲ್ 3595/3612-1999ರಲ್ಲಿ ದಿ: 10-04-2006 ರಂದು ನೀಡಿರುವ ತೀರ್ಪಿನನ್ವಯ ಹಾಗೂ ಈ ಹಿನ್ನೆಲೆಯಲ್ಲಿ, ದಿ: 25-05-06 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಹೊರಡಿಸಿರುವ ಸುತ್ತೋಲೆ ಸಂಖ್ಯೆ:ಸಿಆಸುಇ 25 ಸೇಸ್ಥಆ 2003 ರಂತೆ ಈ ಪ್ರಕರಣದಲ್ಲಿ ದಿನಗೂಲಿ ನೌಕರರನ್ನು ನೇರ ಅಥವಾ ಪರೋಕ್ಷವಾಗಿ ಖಾಯಂಗೊಳಿಸಲು ಬರುವುದಿಲ್ಲವೆಂದು ಕಾನೂನು ಇಲಾಖೆಯು ಅಭಿಪ್ರಾಯಪಟ್ಟಿದ್ದು ಈ ಕುರಿತು ಪರಿಶೀಲಿಸಲಾಗುತ್ತಿದೆ.

975 ಶ್ರೀ ಅಮರೇಶ್ : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2008-09 ಮತ್ತು 2009-10ನೇ ಸಾಲಿನಲ್ಲಿ ಮುಳಬಾಗಿಲು ತಾಲ್ಲೂಕಿನಲ್ಲಿ ಎಷ್ಟು ಕಿ.ಮೀ ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ; ಇದಕ್ಕಾಗಿ ವೆಚ್ಚ ಮಾಡಿರುವ ಮೊತ್ತವೆಷ್ಟು;

ಆ) ತಾಲ್ಲೂಕಿನ ಬಹುಪಾಲು ರಸ್ತೆಗಳು ದುರಸ್ತಿಗೊಳ್ಳದೆ ಸಂಚಾರಕ್ಕೆ ಅಡಚಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಸದರಿ ರಸ್ತೆಗಳ ಆದ್ಯತೆ ಮೇರೆಗೆ ದುರಸ್ತಿಪಡಿಸಲು ಸರ್ಕಾರ ರೂಪಿಸುವ ಕಾರ್ಯಯೋಜನೆಗಳೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಆ) ಮತ್ತು ಇ)

ಮುಳಬಾಗಿಲು ತಾಲ್ಲೂಕಿನಲ್ಲಿ ಒಟ್ಟು 354.38 ಕಿ.ಮೀ ಉದ್ದದ ಜಿಲ್ಲಾ ಮುಖ್ಯ ರಸ್ತೆಗಳಿವೆ. ಇದರ ಪೈಕಿ 2008–09ನೇ ಸಾಲಿನಲ್ಲಿ 26.22 ಕಿ.ಮೀ ಉದ್ದದ ರಸ್ತೆಯನ್ನು ರೂ.333.50 ಲಕ್ಷಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಉಳಿದ 319.16 ಕಿ.ಮೀ ರಸ್ತೆಯನ್ನು ನಿರ್ವಹಣೆ ಮಾಡಿ ಗುಂಡಿರಹಿತ ರಸ್ತೆಯನ್ನಾಗಿಸಲಾಗಿದೆ.

ಈ ತಾಲ್ಲೂಕಿನಲ್ಲಿ 33.30 ಕಿ.ಮೀ ಉದ್ದದ ರಾಜ್ಯ ಹೆದ್ದಾರಿ ಇದೆ. ಮೂಡಿಗೆರೆ–ಮುಳಬಾಗಿಲು ರಾಜ್ಯ ಹೆದ್ದಾರಿ–58ನ್ನು ಕೇಂದ್ರ ಸರ್ಕಾರದ ಆರ್ಥಿಕ ಪ್ರಾಮುಖ್ಯತೆ ಯೋಜನೆಯಡಿಯಲ್ಲಿ ರೂ.479.56 ಲಕ್ಷಗಳ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದ್ದು, ಮುಳಬಾಗಿಲು ತಾಲ್ಲೂಕಿನ ಈ ರಾಜ್ಯ ಹೆದ್ದಾರಿಯ ಸರಪಳಿ ಕಿ.ಮೀ 360.00 ರಿಂದ 392.31 ರವರೆಗೆ ಸೇರ್ಪಡೆಯಾಗಿದೆ. ರಾಜ್ಯ ಹೆದ್ದಾರಿ ನಿರ್ವಹಣೆ ಅಡಿಯಲ್ಲಿ 2.62 ಕಿ.ಮೀ ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಿ ಮರುಡಾಂಬರೀಕರಣಗೊಳಿಸಲಾಗಿದೆ. ಉಳಿದ ರಸ್ತೆಯನ್ನು ರೂ.101.50 ಲಕ್ಷ ವೆಚ್ಚದಲ್ಲಿ ನಿರ್ವಹಣೆ ಮಾಡಿ ಗುಂಡಿರಹಿತ ರಸ್ತೆಯನ್ನಾಗಿ ಮಾಡಲಾಗಿದೆ.

2009–10ನೇ ಸಾಲಿನಲ್ಲಿ ಮುಳಬಾಗಿಲು ತಾಲ್ಲೂಕಿಗೆ ವಿವಿಧ ಯೋಜನೆಗಳಡಿಯಲ್ಲಿ ರಸ್ತೆ ಅಭಿವೃದ್ಧಿಗೆ ಈ ಕೆಳಕಂಡಂತೆ ನುದಾನ ಒದಗಿಸಲಾಗಿದೆ.

ಕ್ರ. ಸಂ.	ಯೋಜನೆ	ರಸ್ತೆ ಉದ್ದ	ಒಟ್ಟು ಅನುದಾನ ರೂ.ಲಕ್ಷಗಳಲ್ಲಿ
1	ಎಸ್‌ಸಿಪಿ	2.68 ಕಿ.ಮೀ	49.16
2	ಟಿಎಸ್‌ಪಿ	1.10 ಕಿ.ಮೀ	3.35
3	ನಬಾರ್ಡ್	3.80 ಕಿ.ಮೀ	59.30
4	ಸಿಆರ್‌ಎಫ್	9.60 ಕಿ.ಮೀ	100.00

ಈ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದ್ದು, ಸಧ್ಯದಲ್ಲೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಇದರ ಜೊತೆಗೆ 2009–10ನೇ ಸಾಲಿನಲ್ಲಿ ರಸ್ತೆಗಳ ಪೂರ್ವ ಮುಂಗಾರ ನಿರ್ವಹಣೆ ಕಾಮಗಾರಿಗಳಿಗೆ ರೂ.34.70 ಲಕ್ಷ ಅನುದಾನವನ್ನು ಒದಗಿಸಲಾಗಿದ್ದು, ಇದರಡಿಯಲ್ಲಿ ದುರಸ್ತಿ ಕಾಮಗಾರಿಗಳು ಸಹ ಪ್ರಗತಿಯಲ್ಲಿವೆ.

ಮುಳಬಾಗಿಲು ತಾಲ್ಲೂಕಿನಲ್ಲಿ ವಿವಿಧ ಯೋಜನೆಗಳು/ ಲೆಕ್ಕಶೀರ್ಷಿಕೆಗಳಡಿಯಲ್ಲಿ ಹಂತಹಂತವಾಗಿ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

975 Sri Amaresh : Hon'ble Minister for Public Works kindly answer to the below question?

a) How many kms of road has been developed during 2008-09 and 2009-10 in Mulabagilu taluk; what is the amount of expenditure made for this;

b) Whether it has come to the notice of the Government that most of the roads in this taluk have not been repaired causing inconvenience for traffic;

c) If so, what are the action plans framed by the Government for repair of said roads on a priority?

Sri C.M.UDASI (Minister for Public Works) :

a) b) and c)

There are totally 345.38 kms long district main roads I Mulabagilu taluk. Out of this, 26.22 km long road has been developed at an expenditure of Rs.333.50 lakhs during the year 2008-09. The remaining 319.16 kms road has been made pothole free by undertaking maintenance.

There is 33.30 kms long State Highway in this taluk. The development of Mudigere-Mulabagilu State Highway-58 has been undertaken under Economic Importance Scheme of Government of India at an estimated cost of Rs.479.56 lakhs, change from km 360.00 to 392.31 of this State Highway in Mulabagilu taluk is included. 2.62 km long road has been asphalted after development under State Highway maintenance. The remaining road has been made pothole free by undertaking maintenance at an expenditure of Rs. 101.50 lakhs.

The following funds have been provided for road development under various schemes in Mulabagilu taluk during the year 2009-10 :-

Sl No	Schemes	Road length In kms.	Total grants Rs.in lakhs
1	SCP	2.68	49.16
2	TSP	0.10	3.35
3	Nabard	3.80	59.30
4	CRF	9.60	100.00

Tender process being in progress in respect of these works, works will be taken up in due course.

In addition to this, Rs.34.70 lakhs of funds has been provided for Pre-monsoon maintenance works during the year 2009-10, maintenance works are also under progress.

The development of roads in Mulabagilu taluk is being undertaken in a phased manner under different schemes/heads of account.

737 ಶ್ರೀ ಅಪ್ಪಸಾಹೇಬ(ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವಪರಂಪರೆಯ ಪಟ್ಟಿಯಲ್ಲಿ (UNESCO) ಐತಿಹಾಸಿಕ ಸ್ಮಾರಕಗಳನ್ನು ಸೇರಿಸಲು ಅನುಸರಿಸುವ ಮಾನದಂಡಗಳೇನು;

ಆ) ರಾಜ್ಯದ ಯಾವ ಯಾವ ಐತಿಹಾಸಿಕ ಸ್ಮಾರಕಗಳು ಯುನೆಸ್ಕೋ ಪಟ್ಟಿಯಲ್ಲಿ ಸೇರಿವೆ;

ಇ) ಹೊಸದಾಗಿ ಯಾವ ಸ್ಮಾರಕ ಹಾಗೂ ಪ್ರದೇಶಗಳನ್ನು ವಿಶ್ವಪರಂಪರೆ ಪಟ್ಟಿಯಲ್ಲಿ ಸೇರಿಸಲು ಸರ್ಕಾರ ಶಿಫಾರಸ್ಸು ಮಾಡಿರುತ್ತದೆ;

ಈ) ಬಿಜಾಪುರದಲ್ಲಿರುವ ವಿಶ್ವವಿಖ್ಯಾತ ಗೋಲಗುಮ್ಮಟವನ್ನು ಯುನೆಸ್ಕೋ ಪಟ್ಟಿಯಲ್ಲಿ ಸೇರಿಸಲು ಸರ್ಕಾರ ಉದ್ದೇಶಿಸಿದೆಯೇ; ಹಾಗಿದ್ದಲ್ಲಿ ಕೈಗೊಂಡ ಕ್ರಮಗಳೇನು;

ಉ) ವಿಶ್ವವಿಖ್ಯಾತ ಗೋಳಗುಮ್ಮಟದ ಸ್ಮಾರಕದ ಅಭಿವೃದ್ಧಿ, ರಕ್ಷಣೆ ಹಾಗೂ ಪ್ರವಾಸಿಗರನ್ನು ಆಕರ್ಷಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಒಂದು ಪ್ರದೇಶದ ಸಾಂಸ್ಕೃತಿಕ ಸಂಪತ್ತಿನ ಪುರಾತನ ಅವಶೇಷಗಳ ವಾಸ್ತುಶಿಲ್ಪ, ಶಿಲ್ಪವರ್ಣಚಿತ್ರಗಳು/ ಭಿತ್ತಿಚಿತ್ರಗಳು ಕೋಟೆ ಕಂದಕಗಳು, ನಗರ ಯೋಜನೆ ರಕ್ಷಣಾವ್ಯೂಹ, ಧಾರ್ಮಿಕ ಕಟ್ಟಡಗಳು, ದಂಡು ಮತ್ತಿತರ